**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಕಚೇರಿ ಆದೇಶದ ಉದ್ಧರಣ**

**ಕಚೇರಿ ಆದೇಶ ಸಂಖ್ಯೆ:** 204 /2021-22 **ದಿನಾಂಕ:** 24-02-2022

ವಿಷಯ: ವಲಯ ಅರಣ್ಯ ಅಧಿಕಾಯಯವರ ವರ್ಗಾವಣೆ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಅಪಜೀ 293 ಅಅಸೇ 2022 (ಇ), ದಿನಾಂಕ: 23-02-2022.

*****

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಅನುಮೋದಿಸಿರುವಂತೆ ಈ ಕೆಳಕಂಡ ವಲಯ ಅರಣ್ಯಾಧಿಕಾರಿಗಳನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಹುದ್ದೆಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಈ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಿ ಆದೇಶಿಸಿದೆ.

| ಕ್ರ. ಸಂ | ವಲಯ ಅರಣ್ಯಾಧಿಕಾರಿಗಳ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ವರ್ಗಾಯಿಸಿರುವ ಹುದ್ದೆ ಮತ್ತು ಸ್ಥಳ |
|---|---|---|
| 1. | ಶ್ರೀ ಸಂತೋಷ ಮನೋಹರ್ ಹೂಗಾರ್, ವಲಯ ಅರಣ್ಯಾಧಿಕಾರಿ, ಮೇಟಿಕುಪ್ಪೆ ವನ್ಯಜೀವಿ ವಲಯ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು. | ವಲಯ ಅರಣ್ಯಾಧಿಕಾರಿ, ಮೈಸೂರು ವನ್ಯಜೀವಿ ವಲಯ, ಮೈಸೂರು ವನ್ಯಜೀವಿ ವಿಭಾಗ - ಶ್ರೀ ಸುರೇಂದ್ರ ಕೆ.ರವರ ಜಾಗಕ್ಕೆ. |
| 2. | ಶ್ರೀ ರಕ್ಷಿತ್ ಆರ್.<br>ವಲಯ ಅರಣ್ಯಾಧಿಕಾರಿ, ನಂಜನಗೂಡು ವಲಯ, ಮೈಸೂರು ವಿಭಾಗ | ವಲಯ ಅರಣ್ಯಾಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಮೈಸೂರು ಹುದ್ದೆಗೆ ಸ್ಥಳ ನಿಯುಕ್ತಿಗೊಳಸಲು ಸದರಿಯವರ ಸೇವೆಯನ್ನು ಜಲಾನಯನ ಅಭಿವೃದ್ಧಿ ಇಲಾಖೆಯ ವಶಕ್ಕೆ ನೀಡಲಾಗಿದೆ.<br>ಸದರಿ ಅಧಿಕಾರಿಗಳು ಆಯುಕ್ತರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಮುಂದೆ ಹಾಜರಾಗಿ ಸ್ಥಳ ನಿಯುಕ್ತಿಗೊಳಿಸಿರುವ ಹುದ್ದೆಯ ಪ್ರಭಾರ ವಹಿಸಿಕೊಳ್ಳಲು ಸೂಕ್ತ ಆದೇಶ ಪಡೆಯುವುದು. |

ಸೂಚನೆ:

1. ಮೇಲಿನ ವರ್ಗಾವಣೆ ಆದೇಶದನ್ವಯ ಸ್ಥಳ ನಿರೀಕ್ಷಣೆಗೆ ಒಳಪಡುವ ವಲಯ ಅರಣ್ಯಾಧಿಕಾರಿಯು ಮುಂದಿನ ಸ್ಥಳ ನಿಯುಕ್ತಿಗಾಗಿ ಕೂಡಲೇ ಈ ಕಛೇರಿಯಲ್ಲಿ ಕಾರ್ಯ ವರದಿ ಮಾಡಿಕೊಳ್ಳಲು ಸೂಚಿಸಿದೆ.
2. ಮೇಲಿನ ಚಲನಾದೇಶವು ಯಾವುದೇ ಹುದ್ದೆಗೆ / ಅಧಿಕಾರಿಯ ವರ್ಗಾವಣೆ ಸಂಬಂಧವಾಗಿ ನ್ಯಾಯಮಂಡಳಿಯ / ನ್ಯಾಯಾಲಯದ ತಡೆಯಾಜ್ಞೆ ಜಾರಿಯಲ್ಲಿದ್ದಲ್ಲಿ ಅಂತಹ ಹುದ್ದೆಗೆ / ಅಧಿಕಾರಿಗೆ ಚಲನಾದೇಶವನ್ನು ಜಾರಿಗೊಳಿಸಬಾರದು ಎಂಬ ಷರತ್ತಿಗೆ ಒಳಪಟ್ಟಿರುತ್ತದೆ.

(ಸಂಜಯ್ ಮೋಹನ್, ಭಾ.ಅ.ಸೇ)
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಸಂಖ್ಯೆ: ಬಿ1/ಸಿಬ್ಬಂದಿ/ವರ್ಗ/ಸಿಆರ್-112/2020-21

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ವನ್ಯಜೀವಿ), ಅರಣ್ಯ ಭವನ, ಬೆಂಗಳೂರು.
4. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಹುಲಿ ಯೋಜನೆ), ಮೈಸೂರು.
5. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವೃತ್ತ, ಮೈಸೂರು.
6. ಅರಣ್ಯ ಸಂರಕ್ಷಣಾಧಿಕಾರಿ, ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ, ಹುಣಸೂರು ವಿಭಾಗ, ಹುಣಸೂರು.
7. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಐಸಿಟಿ ಘಟಕ, ಬೆಂಗಳೂರು ಇವರಿಗೆ ಸದರಿ ಆದೇಶವನ್ನು ತಂತ್ರಾಂಶದಲ್ಲಿ ಕೂಡಲೇ ಅಳವಡಿಸಲು ಸೂಚಿಸಿದೆ.
8. ಮಾನ್ಯ ಅರಣ್ಯ ಸಚಿವರ ಆಪ್ತ ಸಹಾಯಕರು, ವಿಧಾನ ಸೌಧ, ಬೆಂಗಳೂರು.
9. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವಿಭಾಗ, ಮೈಸೂರು.
10. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವನ್ಯಜೀವಿ ವಿಭಾಗ, ಮೈಸೂರು.
11. ಸಂಬಂಧಿಸಿದ ವಲಯ ಅರಣ್ಯ ಅಧಿಕಾರಿಗಳಿಗೆ ನಿಯಂತ್ರಣಾಧಿಕಾರಿಗಳು / ಘಟಕಾಧಿಕಾರಿಗಳ ಮೂಲಕ.
12. ಕಛೇರಿ ಆದೇಶ ಕಡತಕ್ಕೆ.